# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1497 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) |
| 3). | ಉತ್ತರಿಸಬೇಕಾದ ದಿನಾಂಕ | 28/02/2018 |
| 4) | ಉತ್ತರಿಸುವವರು | ಮಾನ್ಯ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಹಾಲಿ ಇರುವ ಸಲಕರಣೆಗಳನ್ನು ಪ್ರಾಮಾಣಿಕ ಮಾನದಂಡಗಳಿಗನುಗುಣವಾಗಿ ಒಂದೇ ಬಾರಿ ಮೇಲ್ದರ್ಜೆಗೇರಿಸಲು 2017-18ನೇ ಸಾಲಿನ ಆಯವ್ಯಯದಲ್ಲಿ ರೂ. 228 ಕೋಟಿಗಳನ್ನು ಉಪಯೋಗಿಸಲಾಗಿದೆ ಎಂದು ತಿಳಿಸಲಾಗಿದ್ದು, ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನವೆಷ್ಟು; | 2017-18ನೇ ಸಾಲಿನ ಆಯವ್ಯಯದಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಹಾಲಿ ಇರುವ ಸಲಕರಣೆಗಳನ್ನು ಪ್ರಾಮಾಣಿಕ ಮಾನದಂಡಗಳಿಗನುಗುಣವಾಗಿ ಒಂದೇ ಬಾರಿ ಮೇಲ್ದರ್ಜೆಗೇರಿಸಲು ಪ್ರತ್ಯೇಕ ಅನುದಾನವನ್ನು ಒದಗಿಸಿರುವುದಿಲ್ಲ. ಆದರೆ ಇಲಾಖೆಯ ಮುಂದುವರೆದ ಕಾರ್ಯಕ್ರಮಗಳಿಗಾಗಿ ಒದಗಿಸಲಾಗಿರುವ ಅನುದಾನದಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದೆ. ಇಲಾಖೆಯ ಮುಂದುವರೆದ ಯೋಜನೆಗೆ ಒದಗಿಸಿಕೊಂಡಿರುವ ಅನುದಾನದ ವಿವರ ಈ ಕೆಳಗಿನಂತಿದೆ.<br>ಲೆಕ್ಕಶೀರ್ಷಿಕೆ<br>1) 2230-02-001-0-03-059 ಇತರೆ ಖರ್ಚು — ರೂ. 100.00 ಕೋಟಿಗಳು<br>2) 2230-02-001-0-03-133 ಎಸ್.ಡಿ.ಪಿ — ರೂ. 32.00 ಕೋಟಿಗಳು<br>ಒಟ್ಟು — ರೂ. 132.00 ಕೋಟಿಗಳು |
| ಆ) | ರೂ. 228 ಕೋಟಿಗಳಲ್ಲಿ ಈವರೆಗೆ ವೆಚ್ಚ ಮಾಡಿದ ಅನುದಾನ ಎಷ್ಟು; | ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಹಾಲಿ ಇರುವ ಸಲಕರಣೆಗಳನ್ನು ಪ್ರಾಮಾಣಿಕ ಮಾನದಂಡಗಳಿಗನುಗುಣವಾಗಿ ಒಂದೇ ಬಾರಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮಕ್ಕೆ ಪ್ರತ್ಯೇಕ ಅನುದಾನ ಒದಗಿಸಿರುವುದಿಲ್ಲ. ಒಟ್ಟಾರೆಯಾಗಿ ಮುಂದುವರೆದ ಕಾರ್ಯಕ್ರಮಗಳಿಗೆ ವೆಚ್ಚವಾಗಿರುವ ವಿವರಗಳು ಈ ಕೆಳಗಿನಂತಿದೆ.<br>1) 2230-02-001-0-03-059 ಇತರೆ ಖರ್ಚು — ರೂ. 25.17 ಕೋಟಿಗಳು<br>2) 2230-02-001-0-03-133 ಎಸ್.ಡಿ.ಪಿ — ರೂ. 10.81 ಕೋಟಿಗಳು<br>ಒಟ್ಟು — ರೂ. 35.98 ಕೋಟಿಗಳು |
| ಇ) | ಈ ಅನುದಾನದಲ್ಲಿ ಎಷ್ಟು ಐ.ಟಿ.ಐ.ಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ; | 156 ಹಳೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಹಾಗೂ 2014-15 ರಲ್ಲಿ ಪ್ರಾರಂಭವಾದ 100 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಯಂತ್ರೋಪಕರಣ ಮತ್ತು ಪೀಠೋಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. |
| ಈ) | ಮೇಲ್ದರ್ಜೆಗೆ ಏರಿಸಲು ಅವಶ್ಯಕತೆ ಇರುವ ಯಾವ ಸಲಕರಣೆಗಳನ್ನು ಅಳವಡಿಸಲಾಗಿದೆ ? (ಪೂರ್ಣವಾದ ಮಾಹಿತಿ ನೀಡುವುದು) | ರಾಜ್ಯದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಮೊದಲನೇ ಹಂತದಲ್ಲಿ ಎಲೆಕ್ಟ್ರೀಷಿಯನ್, ಇ.ಎಂ, ಫಿಟ್ಟರ್, ಮೆಷಿನಿಸ್ಟ್, ಟರ್ನರ್‌ನ ಈ ಐದು ವೃತ್ತಿಗಳಲ್ಲಿ ಕೊರತೆಯಿರುವ Small Tools, Shop Tools, Electronic Equipment, Electronic stimulation software, Electrical Machineries and trainers, Lathe Machine, CNC Machine, Drilling Machine, Furniture and Computer & Peripherals ಗಳನ್ನು ಖರೀದಿಸಿ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಕೌಉಜೀಇ 38 ಕೈತಪ್ರ 2018

(ಆರ್.ವಿ.ದೇಶಪಾಂಡೆ)
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು